ಕರ್ನಾಟಕ ವಿಧಾನ ಸಭೆ

ಗುರುವಾರ, 2ನೇ ಫೆಬ್ರುವರಿ ತಿಂಗಳು 1984

ವಿಧಾನ ಸೌಧದ ವಿಧಾನ ಸಭೆಯ ಸಭಾಂಗಣದಲ್ಲಿ ಸದನವು ಬೆಳಿಗ್ಗೆ 11 ಘಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಡಿ. ಬಿ. ಚಂದ್ರೇಗೌಡ) ಅವರು ಪೀಠವನ್ನು ಅಲಂಕರಿಸಿದರು.

1. ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ನೀಡಲಾದ ಬಾಯಿಮಾತಿನ ಉತ್ತರಗಳು.

ವಿಷಯ : ಅಂಗನವಾಡಿ ಕಾರ್ಯಕರ್ತೆಯರ ಗೌರವ ಧನದ ಬಗೆಗೆ

ಪ್ರಶ್ನೆ : 191 (190) ಶ್ರೀ ಮಲ್ಲಿಕಾರ್ಜುನ ವಿ. ಬನ್ನಿ (ಗುಳೆದಗುಡ್ಡ).— ಮಾನ್ಯ ಸಮಾಜ ಕಲ್ಯಾಣ ಹಾಗೂ ರೇಷ್ಮೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ಕರ್ನಾಟಕ ರಾಜ್ಯದಲ್ಲಿ ಸುಮಾರು 10 ಸಾವಿರಕ್ಕೂ ಮಿಕ್ಕ ಅಂಗನವಾಡಿ ಕಾರ್ಯಕರ್ತೆಯರು ಇರುವ ವಿಷಯ ಸರಕಾರದವರ ಗಮನಕ್ಕೆ ಬಂದಿದೆಯೇ ;

ಆ) ಅವರಿಗೆ ಕೊಡತಕ್ಕ ಗೌರವಧನ ರೂ. 175 ಇದ್ದುದ ಅದನ್ನು ಸುಮಾರು 300ರೂ.ಗೆ ಹೆಚ್ಚಿಸುವ ವಿಚಾರವೇನಾದರೂ ಸರಕಾರದವರ ಪರಿಶೀಲನೆಯಲ್ಲಿದೆಯೇ ;

ಇ) ಹಾಗಿದ್ದಲ್ಲಿ ಅದರ ವಿವರಗಳೇನು ?

ಉತ್ತರ : ಶ್ರೀಮತಿ ಚಂದ್ರಪ್ರಭಾ ಅರಸ್ (ಸಮಾಜ ಕಲ್ಯಾಣ ಹಾಗೂ ರೇಷ್ಮೆ ಮಂತ್ರಿಗಳು) —

ಅ) ಕರ್ನಾಟಕ ರಾಜ್ಯದಲ್ಲಿ 7551 ಅಂಗನವಾಡಿ ಕಾರ್ಯಕರ್ತೆಯರು 78 ಯೋಜನೆಯಲ್ಲಿ ಗೌರವ ಸಂಭಾವನೆಯ ಮೇಲೆ ಕೆಲಸ ನಿರ್ವಹಿಸುತ್ತಿದ್ದಾರೆ.

ಆ) ಇಲ್ಲಿ ಇದು ಕೇಂದ್ರ ಸರಕಾರದ ಯೋಜನೆಯಾಗಿದ್ದು ರಾಷ್ಟ್ರಮಟ್ಟದಲ್ಲಿ ಪರಿಗಣಿಸಬೇಕಾಗಿದೆ.

ಇ) ಉದ್ಭವಿಸುವುದಿಲ್ಲ.

ಶ್ರೀ ಮಲ್ಲಿಕಾರ್ಜುನ ವಿ. ಬನ್ನಿ.— ಅಂಗನವಾಡಿ ಕಾರ್ಯಕರ್ತೆಯರು ಎಷ್ಟು ಹಳ್ಳಿಗಳಿಗೆ ಒಬ್ಬರು ಇರುತ್ತಾರೆ. ಅವರ ಕಾರ್ಯಗಳು ಏನು ? ಎರಡನೆಯದಾಗಿ ಅಂಗನವಾಡಿ ಕಾರ್ಯಕರ್ತೆಯರು ಎಂದರೆ ಸಾಮಾನ್ಯವಾಗಿ ಮಹಿಳೆಯರೇ ಇರುವುದರಿಂದ ನಮ್ಮ ದೇಶದ ಪ್ರಧಾನಮಂತ್ರಿಯವರು ಮಹಿಳೆಯರು ಆಗಿರುತ್ತಾರೆ, ತಾವೂ ಕೂಡ ಮಹಿಳೆಯರೇ ಆಗಿರುತ್ತೀರಿ ಅವರಿಗೆ ಈಗಿರತಕ್ಕಂಥ ಗೌರವಧನ ಬಹಳ ಕಡಿಮೆ ಅಲ್ಲವೆ ಎಂಬುದನ್ನು ಈವತ್ತಿನ ಕಾರ್ಯವೆಚ್ಚ ತಮಗೆ ಗೊತ್ತಿದೆ. ಈಗ ಏನು 130 ರೂಪಾಯಿಗಳನ್ನು ಗೌರವ ಧನವೆಂದು ಕೊಡುತ್ತಿದ್ದೀರಿ ಇದನ್ನು ಕನಿಷ್ಟಪಕ್ಷ 300 ರೂಪಾಯಿ ಗಳವರೆಗೆ ಹೆಚ್ಚಿಸುವುದಕ್ಕೆ ಕೇಂದ್ರ ಸರ್ಕಾರದ ಮೇಲೆ ಒತ್ತಾಯ ತರಬೇಕೆಂದು ಹೇಳುತ್ತೇನೆ.

ಶ್ರೀಮತಿ ಚಂದ್ರಪ್ರಭಾ ಅರಸ್.— ಮಾನ್ಯ ಅಧ್ಯಕ್ಷರೇ ನಾನು ಮೊದಲೇ ತಿಳಿಸಿದ ಹಾಗೆ ಇದು ಕೇಂದ್ರ ಸರ್ಕಾರದ ಒಂದು ಯೋಜನೆಯಾಗಿದೆ. ಸಂಭಾವನೆಯನ್ನು ಹೆಚ್ಚು ಮಾಡಬೇಕೆಂದು ನಾನು ಕೂಡ ಕೇಂದ್ರ ಸರ್ಕಾರಕ್ಕೆ ಒತ್ತಾಯ ಪೂರ್ವಕವಾಗಿ ಪತ್ರವನ್ನು ಬರೆದಿದ್ದೇನೆ. ಅವರಿಂದ ಬಂದಂಥ ಉತ್ತರ ಅಷ್ಟೊಂದು ಆಶಾದಾಯಕವಾಗಿರಲಿಲ್ಲ. ಅಷ್ಟೇ ಅಲ್ಲ ಇದು ಇಡೀ ರಾಷ್ಟ್ರದ ಯೋಜನೆಯಾಗಿ ಇರುವುದರಿಂದ, ನಮ್ಮ ಹಿಂದಿನ ಒಂದು ನಿರ್ಣಯದ ಪ್ರಕಾರ ಅವರು ಕೊಡುತ್ತಾ ಇರತ್ಕಂಥ ಒಂದು ಸಂಭಾವನೆ, ಗೌರವ ಧನ ಅವರ ಸೇವಾ ಕಾರ್ಯದ ನಿಮಿತ್ತವಾಗಿ ಕೊಡುತ್ತಾ ಇರತಕ್ಕಂಥ ಹಣವಾಗಿ ಇರುವುದರಿಂದ ಅದನ್ನು ಹೆಚ್ಚು ಮಾಡುವಂಥ ಒಂದು ಅಭಿಪ್ರಾಯ ನಮ್ಮಲ್ಲಿ ಈಗ ಇಲ್ಲ ಎಂದು ಉತ್ತರ ಬಂದಿದೆ. ಎಸ್.ಎಸ್.ಎಲ್.ಸಿ. ಪಾಸ್ ಆಗಿರತಕ್ಕಂಥವರಿಗೆ 170 ರೂಪಾಯಿಗಳು, ಎಸ್.ಎಸ್.ಎಲ್.ಸಿ. ನಾಪಾಸಾಗಿರತಕ್ಕಂಥವರಿಗೆ 165 ರೂಪಾಯಿಗಳ ಸಂಭಾವನೆಯನ್ನು ಕೊಡುತ್ತಿದ್ದೇವೆ. ಈ ಗೌರವ ಧನದ ಒಂದು ರೂಪದಲ್ಲಿ ಕೊಡುತ್ತಿರುವ ಈ ಹಣವನ್ನು ಇನ್ನು ಹೆಚ್ಚು ಮಾಡಲಿಕ್ಕೆ ಸಧ್ಯಕ್ಕೆ ಆಗುವುದಿಲ್ಲವೆಂದು ಕೇಂದ್ರ ಸರ್ಕಾರದವರು ಸ್ಪಷ್ಟವಾಗಿ ತಿಳಿಸಿದ್ದರಿಂದ ನಮ್ಮ ರಾಜ್ಯ ಸರ್ಕಾರದ ಮಟ್ಟದಲ್ಲಿಯಾದರೂ ಅವರಿಗೆ ಸ್ವಲ್ಪ ಮಟ್ಟಿಗೆ ಹೆಚ್ಚಿಗೆ ಹಣವನ್ನು ಕೊಡಬೇಕೆಂದು ಕೇಳಿಕೊಂಡಿರುವುದಕ್ಕೆ ಸರ್ಕಾರವು ಅದನ್ನು ತೀವ್ರವಾಗಿ ಪರಿಶೀಲನೆ ಮಾಡುತ್ತಿದೆ. ನಾವೂ ಕೂಡ ಬಹಳ ಒತ್ತಾಯ ಪೂರ್ವಕವಾಗಿ ಬೇಡಿಕೆಯನ್ನು ಇಟ್ಟಿದ್ದೇವೆ. ಸಾಧ್ಯವಾದಷ್ಟು ಶೀಘ್ರವಾಗಿ ಅವರ ಸಂಭಾವನೆಯನ್ನು ಹೆಚ್ಚಿಗೆ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ.